*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 66/2018
CW- 19 PW-4

ಹೆಸರು : ಶಂಕರಗೌಡ ಪಾಟೀಲ್

ತಂದೆಯ ಹೆಸರು : ವೀರಣ್ಣ ಗೌಡ ಪಾಟೀಲ್

ವಯಸ್ಸು : 49

ಉದ್ಯೋಗ : ಡಿ.ವೈ.ಎಸ್.ಪಿ. ಶಹಬಾದ್

ವಾಸ ಸ್ಥಳ : ಶಹಬಾದ್

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 07.04.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2013 ರಿಂದ 2018 ರವರೆಗೆ ಚಿತ್ತಾಪುರ ಪೋಲೀಸ್ ಠಾಣೆಯವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ-18ರವರಿಂದ ಪಡೆದು ಮುಂದಿನ ತನಿಖೆಯನ್ನು ಜರುಗಿಸಿರುತ್ತೇನೆ.

ದಿಃ 13.11.2017 ರಂದು ಚಾಸಾ-8ರವರು ಸ್ಥಳ ತೋರಿಸಿದ ಮೇರೆಗೆ ಗುನ್ಹಾ ಸ್ಥಳಕ್ಕೆ ಹೋಗಿ ಪಂಚರಾದ ಚಾಸಾ-12 ಮತ್ತು 13ರವರ ಸಮಕ್ಷಮ ಗುನ್ಹಾ ಸ್ಥಳದ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 10.15ರಿಂದ 11.15ರವರೆಗೆ ಜರುಗಿಸಿರುತ್ತೇನೆ. ಗುನ್ಹಾ ಸ್ಥಳದಲ್ಲಿದ್ದ ಮೋಟಾರ್ ಸೈಕಲ್ ಸಂಖ್ಯೆ KA-09-EP-8140 ಮತ್ತು ಟಾಟಾ ಏಸ್ ವಾಹನ ಸಂಖ್ಯೆ MH-13-AX-8196 ಗಳನ್ನು ಜಪ್ತು ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ- 1ರವರ ಪುರವಣಿ ಹೇಳಿಕೆಯನ್ನು ಪಡೆದಿರುತ್ತೇನೆ. ಸಾಕ್ಷಿದಾರರಾದ ಚಾಸಾ-4 ರಿಂದ 8ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಅಪಘಾತಕ್ಕೀಡಾದ ವಾಹನಗಳ ಪರಿಶೀಲನೆ ಕುರಿತು ಚಾಸಾ-16ರವರಿಗೆ

ನಿವೇದಿಸಿಕೊಂಡು ಅವರಿಂದ ದಿಃ 25.12.2017 ರಂದು ಐ.ಎಮ್.ವಿ. ವರದಿಯನ್ನು ಪಡೆದಿರುತ್ತೇನೆ.

ದಿಃ 25.11.2017ರಂದು ಗಾಯಾಳು ಚಾಸಾ-3ರವರ ಹೇಳಿಕೆಯನ್ನು ಕಲಬುರಗಿಯ ಕಾಮರೆಡ್ಡಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಅದೇ ದಿನ ಆರೋಪಿತ ಠಾಣೆಗೆ ಹಾಜರಾಗಿದ್ದು ಆತನಿಗೆ ವಿಚಾರಣೆ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಆರೋಪಿತನಿಂದ ಪಡೆದ ವಾಹನದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2, 4 ರಿಂದ 8 ರವರ ಪುರವಣಿ ಹೇಳಿಕೆಗಳನ್ನು ಪಡೆದಿರುತ್ತೇನೆ. ಅಪಘಾತಕ್ಕಿಡಾದ ವಾಹನಗಳನ್ನು ಸದರಿ ವಾಹನದ ಮಾಲಿಕರಿಂದ Indemnity bond ಪಡೆದು ಬಿಡುಗಡೆ ಮಾಡಿರುತ್ತೇನೆ.

ದಿಃ 04.12.2017ರಂದು ಮೃತ ಮಲ್ಲಿಕಾರ್ಜುನ್ ಇವರ ಪಿ.ಎಮ್. ವರದಿಯನ್ನು ಪಡೆದಿರುತ್ತೇನೆ.

ದಿಃ 29.12.2017ರಂದು ಈ ಪ್ರಕರಣದ ಗಾಯಾಳುವಾದ ಚಾಸಾ-3ರವರ ಗಾಯದ ಪ್ರಮಾಣಪತ್ರವನ್ನು ಕಾಮರೆಡ್ಡಿ ಆಸ್ಪತ್ರೆ ಕಲಬುರಗಿಯವರಿಂದ ಪಡೆದಿರುತ್ತೇನೆ.

ದಿಃ 02.01.2018ರಂದು ಚಾಸಾ-9ರವರು ತಮ್ಮ ಬೈಕ್ ನ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಾನು ಅವರಿಂದ Indemnity bond ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ಮತ್ತು ಚಾಸಾ-9 ಮತ್ತು 10 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ತನಿಖೆ ಪೂರ್ತಿಯಾದ ಕಾರಣ ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾ ಧಾರಗಳಿದ್ದ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಜರುಗಿಸಿದ ಸ್ಥಳ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದಸ್ಥಳ ಪಂಚನಾಮೆಯನ್ನು ನಿಪಿ-5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ- 5ಎ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳ ಸಾಕ್ಷ್ಯತ್ವ ಪ್ರಮಾಣಪತ್ರ ಇಲ್ಲದಿದ್ದ ಕಾರಣ ಅವುಗಳನ್ನು ನಿಶಾನೆಗೊಳಿಸಲಾಗಲಿಲ್ಲ. ನಾನು ಸ್ವೀಕರಿಸಿದ ಪಿ.ಎಮ್ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪಿ.ಎಮ್ ವರದಿಯನ್ನು ನಿಪಿ-6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 6ಎ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಐ.ಎಮ್.ವಿ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಐ.ಎಮ್.ವಿ. ವರದಿಯನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 7ಎ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ Indemnity bondಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ Indemnity bondಗಳನ್ನು ಕ್ರಮವಾಗಿ ನಿಪಿ- 8 ಮತ್ತು 9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ- 8ಎ ಮತ್ತು 9ಎ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಗಾಯದ ಪ್ರಮಾಣಪತ್ರವನ್ನು ನೋಡಿದರೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣಪತ್ರವನ್ನು ನಿಪಿ- 10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ- 10ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಿಂದ 4 ಹೇಳಿಕೆಗಳನ್ನು ನೋಡಿ ಸಾಕ್ಷಿದಾರರು ತನ್ನ ಸಮಕ್ಷಮ ಸದರಿ ಪುರವಣಿ ಮತ್ತು ಸದರಿ ಹೇಳಿಕೆಗಳನ್ನು ನೀಡಿದ್ದಾರೆಂದು ಗುರುತಿಸಿರುತ್ತಾರೆ. ಚಾಸಾ- 18 ರವರು ದಾಖಲಿಸಿದ ಪ್ರ.ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ನಾನು ಈ ಪ್ರಕರಣದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತ ಇಂದು ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಎನ್.ಪಿ. ವಕೀಲರಿಂದ</u>

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತನಿಖೆ ಮಾಡದೆ ನಿಮ್ಮ ಇಲಾಖಾ ಅಧಿಕಾರಿಗಳು ಮೃತ ವ್ಯಕ್ತಿಯ ಕುಟುಂಬದವರಿಗೆ ಪರಿಹಾರ ಹಣ ಸಿಗಲಿ ಎಂದು ಮಾಡಿದ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಗುನ್ನೆ ಮಾಡಿಲ್ಲ

ಎಂದು ಕಂಡು ಬಂದರೂ ಸಹ ಆರೋಪಿತನ  ವಿರುದ್ಧ ಯಾಂತ್ರಿಕವಾಗಿ ತನಿಖೆ ಮಾಡಿ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.

*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 125/2017
CW- 20 PW-6

ಹೆಸರು : ಶಂಕರಗೌಡ ಪಾಟೀಲ್

ತಂದೆಯ ಹೆಸರು : ವೀರಣ್ಣ ಗೌಡ ಪಾಟೀಲ್

ವಯಸ್ಸು : 49

ಉದ್ಯೋಗ : ಡಿ.ವೈ.ಎಸ್.ಪಿ. ಶಹಬಾದ್

ವಾಸ ಸ್ಥಳ : ಶಹಬಾದ್

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 07.04.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2013 ರಿಂದ 2018 ರವರೆಗೆ ಚಿತ್ತಾಪುರ ಪೋಲೀಸ್ ಠಾಣೆಯವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ-19ರವರಿಂದ ಪಡೆದು ಮುಂದಿನ ತನಿಖೆಯನ್ನು ಜರುಗಿಸಿರುತ್ತೇನೆ.

ದಿಃ 18.10.2016ರಂದು ಅಪಘಾತಕ್ಕೀಡಾದ ವಾಹನಗಳ ಪರಿಶೀಲನೆ ಕುರಿತು ಚಾಸಾ-15ರವರಿಗೆ ನಿವೇದಿಸಿಕೊಂಡು ಅವರಿಂದ ದಿಃ 23.11.2016 ರಂದು ಐ.ಎಮ್.ವಿ. ವರದಿಯನ್ನು ಪಡೆದಿರುತ್ತೇನೆ.

ದಿಃ 20.10.2016ರಂದು ಆರೋಪಿತನು ಠಾಣೆಗೆ ಹಾಜರಾಗಿದ್ದು ಆತನನ್ನು ದಸ್ತಗಿರಿ ಕ್ರಮ ಪಾಲಿಸಿ ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ KA-32-TA-9527 ಮತ್ತು KA-32-T-9045ನೇದ್ದರ ದಾಖಲೆಗಳನ್ನು ಸದರಿ ವಾಹನದ ಮಾಲಿಕರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಪ್ರಕರಣದ ಸಾಕ್ಷಿದಾರರಾದ

ಚಾಸಾ-4 ರಿಂದ 8, 10 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸದರಿ ಟ್ರ್ಯಾಕ್ಟರ್ ವಾಹನವನ್ನು ಅದರ ಮಾಲಿಕರಿಗೆ Indemnity bond ಅಡಿಯಲ್ಲಿ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ-1ರವರ ಪುರವಣಿ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 24.10.2016ರಂದು ಅಪಘಾತಕ್ಕೀಡಾದ ಅಟೋ ರಿಕ್ಷಾ ನೋಂದಣಿ ಸಂಖ್ಯೆ KA-32-B-9215ನೇದ್ದನ್ನು ಸದರಿ ಮಾಲಿಕರಿಂದ ದಾಖಲಾತಿಗಳನ್ನು ಪಡೆದು Indemnity bond ಅಡಿಯಲ್ಲಿ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ-9ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 05.12.2016ರಂದು ಈ ಪ್ರಕರಣದ ಗಾಯಾಳುಗಳಾದ ಚಾಸಾ-2 ಮತ್ತು 3ರವರ ಗಾಯದ ಪ್ರಮಾಣಪತ್ರಗಳನ್ನು ಯನೈಟೆಡ್ ಆಸ್ಪತ್ರೆ ಕಲಬುರಗಿಯವರಿಂದ ಪಡೆದಿರುತ್ತೇನೆ.

ದಿಃ 09.02.2017ರಂದು ಈ ಪ್ರಕರಣದ ಮೃತ ವ್ಯಕ್ತಿಯ ಪಿ.ಎಮ್. ವರದಿಯನ್ನು ಪಡೆದಿರುತ್ತೇನೆ.

ತನಿಖೆ ಪೂರ್ತಿಯಾದ ಕಾರಣ ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾ ಧಾರಗಳಿದ್ದ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಸ್ವೀಕರಿಸಿದ ಐ.ಎಮ್.ವಿ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಐ.ಎಮ್.ವಿ. ವರದಿಯನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 7ಎ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಶವ ಪರೀಕ್ಷಾ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಶವ ಪರೀಕ್ಷಾ ವರದಿಯನ್ನು ನಿಪಿ-8 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ Indemnity bondಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ Indemnity bondಗಳನ್ನು ಕ್ರಮವಾಗಿ ನಿಪಿ- 9 ರಿಂದ 11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು